**ಶ್ರೀ ವಿಶ್ವನಾಥ @ ಆನಂದ್ ಸಿ ಮಾಮನಿ:** ಗ್ರಾಮಪಂಚಾಯತಿಯಲ್ಲಿ ಹಣ ಇರುವುದಿಲ್ಲ.

(ಗೊಂದಲ)

**44(15); ಶ್ರೀ ಆರ್.ವಿ. ದೇಶಪಾಂಡೆ.** ಈ ವಿಷಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಬರುತ್ತದೆ Direct Recruitment ವಿಷಯ DPAR ಗೆ ಬರುತ್ತದೆ ತಮಗೆ ಪತ್ರ ಬರೆದಿದ್ದೇವೆ.

**ಅಧ್ಯಕ್ಷರು:** ಹೌದೇ? ಬೇರೆ ಇಲಾಖೆಗೆ ವರ್ಗಾವಣೆ ಮಾಡೋಣ. ಆಯಿತು.

**ಶ್ರೀ ರಾಜು ಅಲಗೂರು:** ಈ ಪ್ರಶ್ನೆಗೆ ಉತ್ತರ ಯಾವಾಗ ಸಿಗುತ್ತದೆ?

**ಅಧ್ಯಕ್ಷರು:** ಅದು ಬೇರೆ ಇಲಾಖೆಗೆ ಹೋಗಬೇಕು. ತಪ್ಪಾಗಿ ಬಂದಿದೆ ಅದನ್ನು ಸರಿಪಡಿಸಬೇಕು

**ಶ್ರೀ ರಾಜು ಅಲಗೂರು:** ಉತ್ತರ ಯಾವಾಗ ಸಿಗುತ್ತದೆ ?

**ಅಧ್ಯಕ್ಷರು:** ಈ ವಾರದಲ್ಲಿ ಹಾಕುತ್ತೇನೆ.

**ಗ್ರಾಮಪಂಚಾಯತಿಗಳಲ್ಲಿ "ಈ" ಸ್ವತ್ತು ಮತ್ತು "ಬಿ" ಖಾತೆ ಯೋಜನೆ**

**567; ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)**

ಅ) "ಇ" ಸ್ವತ್ತು ಯೋಜನೆಯನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆಯೇ, ಈ ಸಂಬಂಧ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆಯೇ,

ಆ) "ಇ" ಸ್ವತ್ತು ಪ್ರಕ್ರಿಯೆಯಲ್ಲಿ ಆಸ್ತಿಗಳ ನೋಂದಣಿ ಕಾರ್ಯ ಪೂರ್ಣ ಗೊಂಡಿದೆಯೇ: